ಶೋಷಿತರಿಗೆ ಸಾಮಾಜಿಕ ನ್ಯಾಯ ಸಿಗಬೇಕು: ಶಿಮೂಶ

ಶರಣ ಸಂಗಮ
ಚಿಂತನ ವಿಷಯ : : ವಚನ ಸಾಹಿತ್ಯ ಮತ್ತು ಸಾಮಾಜಿಕ ನ್ಯಾಯ
ದಿನಾಂಕ : -2017 ಮಂಗಳವಾರ ಸಮಯ : ಸಂಜೆ 6.30
ಅಮೃತ ಆಯುರ್ವೇದಿಕ್ ಮೆಡಿಕಲ್ ಕಾಲೇಜು

ಚಿತ್ರದುರ್ಗ

ಶೋಷಣೆ ಅದೊಂದು ಯಾತನೆ. ಶೋಷಣೆ ಮತ್ತು ತುಳಿತಕ್ಕೊಳಗಾದವರಿಗೆ ಸಾಮಾಜಿಕ ನ್ಯಾಯ ದೊರಕುವಂತಾಗಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಅಮೃತ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ಬಸವಕೇಂದ್ರ ಶ್ರೀಮುರುಘಾಮಠ, ಬಸವೇಶ್ವರ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಮತ್ತು ಜಿಲ್ಲಾ ಬಸವಕೇಂದ್ರ ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಶರಣ ಸಂಗಮ ಕಾರ್ಯಕ್ರಮದಲ್ಲಿ ವಚನ ಸಾಹಿತ್ಯ ಮತ್ತು ಸಾಮಾಜಿಕ ನ್ಯಾಯ ವಿಷಯ ಕುರಿತು ಶ್ರೀಗಳು ಮಾತನಾಡಿದರು

ಶೋಷಣೆ ಜೀವನವಿಡೀ ವೇದನೆಯಾಗಿ ಇಂದಿಗೂ ಕೂಡ ಸಮಾಜದಲ್ಲಿ ಸತಾಯಿಸುತ್ತಿರುವ ರೋಗವಾಗಿದೆ. ಬುದ್ಧ ಅಮಾನವೀಯ ಆಚರಣೆಗಳನ್ನು ನಿಲ್ಲಿಸಿದರು. ನಂತರ ಬಸವಣ್ಣ ಈ ಸಾಲಿನಲ್ಲಿ ಬಂದು ನಿಂತರು. ಶ್ರೇಣೀಕೃತವಾದ ಸಮಾಜ ಇತ್ತು. ನಾಲ್ಕು ವರ್ಗಗಳಿದ್ದವು. ಶೂದ್ರನ ಸ್ಥಾನಮಾನ ಮೇಲ್ವರ್ಗದವರ ಸೇವೆ ಮಾಡುವುದೇ ಆಗಿತ್ತು. ಇಂತಹ ಅಸಹನೀಯ ಪರಿಸ್ಥಿತಿ ಇತ್ತು. ಕುಲಹದಿನೆಂಟು ಜಾತಿಯವರೆಲ್ಲರೂ ಒಂದಾಗಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದರು ಎಂದು ನುಡಿದರು

ಇಂದಿನ ಮಹಿಳೆಯರ ಸಬಲೀಕರಣ ಅಂದಿನ ಮಹಿಳೆಯರ ವಿಮೋಚನೆ. ಮಾನವನ ಜ್ವಲಂತ ಸಮಸ್ಯೆಗಳು ಇಂದಿಗೂ ಇವೆ. ಬುದ್ಧ, ಬಸವ, ಏಸು, ಪೈಗಂಬರ್, ಅಂಬೇಡ್ಕರ್, ಗಾಂಧೀಜಿಯವರ ಚಿಂತನೆಗಳನ್ನು ಬಿತ್ತಬಹುದು. ಆದರೆ ನಾವು ಅವರಾಗಲು ಸಾಧ್ಯವಿಲ್ಲ, ಕಾರಣ ಅಂತಹ ಮೂಲಭೂತ ಸಮಸ್ಯೆಗಳನ್ನು ಎತ್ತಿ ಹೋರಾಟ ನಡೆಸಿದ್ದಾರೆ. ಅಂತಹ ಸಮಸ್ಯೆಗಳು ಇಂದು ಇಲ್ಲವಾದ್ದರಿಂದ ಅವರಂಥಾಗಲು ಸಾಧ್ಯವಿಲ್ಲ, ಅವರ ಮಾರ್ಗದಲ್ಲಿ ನಡೆಯುವುದರಿಂದ ಅವರನ್ನು ನೆನಪಿಸಬಹುದು.

ವೈದಿಕ ಆಚರಣೆಗಳು: ಕೆಲವರಿಗೆ ಧರ್ಮ, ಸಿದ್ಧಾಂತ ಇವು ಯಾವುವು ರುಚಿಸುವುದಿಲ್ಲ, ಈ ಆಚರಣೆಗಳನ್ನು ಕೆಲವರು ಧರ್ಮ ಎಂದು ಆಚರಿಸುತ್ತಾರೆ. ಇವು ಆಧ್ಯಾತ್ಮಿಕತೆಗಿಂತಲು ಮುಖ್ಯವಾಗಿ ವಿಜೃಂಬಿಸುತ್ತಿದ್ದವು. ಅವರು ವೈದಿಕ ಆಚರಣೆಯಲ್ಲಿ ಎಲ್ಲದನ್ನೂ ಕಾಣುತ್ತಾರೆ.

ಮಾನವೀಯ ಮೌಲ್ಯಗಳು : ನಾವು ಮಾನವೀಯ ಮೌಲ್ಯಗಳನ್ನು ಆಚರಿಸಬೇಕು. 21ನೇ ಶತಮಾನದಲ್ಲಿ ಮಾನವ ಮಾನವನಾಗಿ ಉಳಿಯಬೇಕಾದರೆ ಮಾನವೀಯ ಮೌಲ್ಯಗಳನ್ನು ಅನುಸರಿಸಬೇಕು. ನಮ್ಮೊಳಗೆ ಮೌಲ್ಯಗಳು ವಿಜೃಂಭಿಸಬೇಕು. ನಮ್ಮೊಳಗೆ ಅಂತಹ ಮಾನವ ಉದಯಿಸಬೇಕು. ನಾವು ಕೃತಿಯಲ್ಲಿ ಮತ್ತು ಆಕೃತಿಯಲ್ಲಿ ಮಾನವರಾಗಬೇಕು ಎಂದರು.

ವಿಷಯಾವಲೋಕನ ಮಾಡಿದ ಚಳ್ಳಕೆರೆ ಬಾಪೂಜಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ.ಜಿ.ವಿ. ರಾಜಣ್ಣ, ದೇಶೀ ಚಹರೆಯ ಅವಲೋಕನವೇ ವಚನ ಸಾಹಿತ್ಯ. ಜನಪದ ಪರಂಪರೆಯ ಮತ್ತು ಜನಪದ ಸಾಹಿತ್ಯದ ಮುಂದುವರಿದ ಭಾಗ. ವಚನ ಸಾಹಿತ್ಯದಲ್ಲಿ ಜೀವಪರವಾದ ಧ್ವನಿ ಇದೆ. ಚಳವಳಿಗಳು ಅಥವಾ ಆಂದೋಲನ ಸುಮ್ಮನೆ ಹುಟ್ಟುವುದಿಲ್ಲ ಇದು ಜನರಿಗೆ ಧ್ವನಿಯಾಗುತ್ತದೆ. ಇದರ ಮುಂದಾಳತ್ವವನ್ನು ಬಸವಣ್ಣನವರು ವಹಿಸಿದ್ದರು. ಬರವಣಿಗೆ ಹೋರಾಟದ ಮೂಲಕ ವಚನ ಚಳುವಳಿ ರೂಢಿಸಿಕೊಳ್ಳುತ್ತದೆ. ಆದ್ದರಿಂದ ಇದೊಂದು ಬಹುಮುಖ್ಯ ಕ್ರಾಂತಿಯಾಗುತ್ತದೆ. ಬಿದ್ದವರ ಬದುಕಿಗೆ ಆಸರೆಯಾಗುತ್ತದೆ. ಬಸವಾದಿ ಶರಣರು ಆದರ್ಶ ರಾಜ್ಯದ ಜೊತೆಗೆ ಭಕ್ತಿಯನ್ನು ಬಿತ್ತಿದರು. ಧ್ವನಿಯಿಲ್ಲದವರಿಗೆ ಧ್ವನಿಕೊಡುವ ಕೆಲಸ ಮಾಡಿದರು. ಭಕ್ತಿ, ಕಾಯಕ, ದಾಸೋಹ ಇವು ಅಂದು ಬಹುಮುಖ್ಯವಾಗುತ್ತದೆ. ಮಾನವನಾಗುವ ಕಲ್ಪನೆಯನ್ನು 12ನೇ ಶತಮಾನ ನೀಡಿತು. ಕಾಯಕ ಅತ್ಯಂತ ನಿಷ್ಠೆಯಿಂದ ಕೂಡಿರಬೇಕು. ದೇವರ ಹೆಸರಿನಲ್ಲಿ, ಸಂಘ ಸಂಸ್ಥೆಗಳ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಹಣವನ್ನು ಗಳಿಸುವ ಪ್ರವೃತ್ತಿಗೆ ಜನ ಮುಂದಾಗಿದ್ದಾರೆ. ಸ್ವಾವಲಂಬನೆ ಅವರಿಗೆ ಮುಖ್ಯವಾಗಿತ್ತು ಎಂದರು.

ಅಮೃತ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಗುರುಸ್ವಾಮಿ ಮಾತನಾಡಿದರು. ಶ್ರೀ ಬಸವಕಿರಣ ಸ್ವಾಮಿಗಳು, ಕೇತೇಶ್ವರ ಮಠದ ಸ್ವಾಮಿಗಳು, ಎಸ್.ಕೆ.ಬಿ.ಪ್ರಸಾದ್, ಡಾ. ಕೃಷ್ಣಪ್ಪ, ಆರ್. ಮಲ್ಲಿಕಾರ್ಜುನಯ್ಯ, ಪತ್ರಕರ್ತ ಜಿ.ಎಸ್. ಉಜ್ಜನಪ್ಪ,ಎ.ವಿಜಯಕುಮಾರ್ ಮುಂತಾದವರಿದ್ದರು.

ಜಮುರಾ ಕಲಾವಿದರು ವಚನ ಪ್ರಾರ್ಥನೆ ನಡೆಸಿಕೊಟ್ಟರು. ಬಿ.ವಿ. ವಿಶ್ವನಾಥ್ ಸ್ವಾಗತಿಸಿದರು. ನಾಗರಾಜ್ ಸಂಗಮ್ ವಂದಿಸಿದರು. ಹುರಳಿ ಬಸರಾಜ್ ನಿರೂಪಿಸಿದರು.

ಪಳಕಿಹಳ್ಳಿಯಲ್ಲಿ ನಾಳೆ ಸಚಿವರ ಗ್ರಾಮ ವಾಸ್ತವ್ಯ ಅಭಿವೃದ್ಧಿ ಕಾಮಗಾರಿ ಸೌಲಭ್ಯ ವಿತರಣೆಗೆ ಸಿದ್ದತೆ

ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕಿನ ಪಳಕಿಹಳ್ಳಿಯಲ್ಲಿ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಆಂಜನೇಯರವರು ಡಿಸೆಂಬರ್ 8 ರಂದು ಗ್ರಾಮ ವಾಸ್ತವ್ಯ ಮಾಡಲಿದ್ದಾರೆ. ಅಂದು ಗ್ರಾಮದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳು ಹಾಗೂ ಜನರಿಗೆ ನೀಡಬೇಕಾದ ವಿವಿಧ ಸೌಲಭ್ಯಗಳ ವಿತರಣೆ ಮಾಡಲು ಸಿದ್ದತೆ ನಡೆಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ವಿ.ವಿ.ಜ್ಯೋತ್ಸ್ನಾ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಪರಿಶೀಲನೆ ನಡೆಸಿದರು.

ವಿವಿಧ ಅಭಿವೃದ್ಧಿ ನಿಗಮಗಳಿಂದ ಗಂಗಾ ಕಲ್ಯಾಣದಡಿ ಕೊರೆಯಲಾದ ಕೊಳವೆಬಾವಿಗಳಿಗೆ ಪಂಪ್, ಮೋಟಾರ್ ವಿತರಣೆ ಮಾಡಲಾಗುತ್ತದೆ. ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ಸೇರಿದಂತೆ ವಸತಿ ಯೋಜನೆಯಡಿ ಮನೆಗಳ ನಿರ್ಮಾಣಕ್ಕೆ ಕಾರ್ಯಾದೇಶ, ಶೌಚಾಲಯಗಳ ನಿರ್ಮಾಣಕ್ಕೆ ಕಾರ್ಯಾದೇಶ, ಉದ್ಯೋಗ ಖಾತರಿಯಡಿ ನಿರ್ಮಾಣ ಮಾಡುವ ಕಾಮಗಾರಿಗಳಿಗೆ ಕಾರ್ಯಾದೇಶ ಸೇರಿದಂತೆ ಕೃಷಿ ಇಲಾಖೆಯಿಂದ ಕೃಷಿಹೊಂಡ ನಿರ್ಮಾಣಕ್ಕೆ ಕಾರ್ಯಾದೇಶ ಹಾಗೂ ಪರಿಕರಗಳ ವಿತರಣೆ ಮಾಡಲಾಗುತ್ತದೆ ಎಂದರು.

ಉದ್ಯೋಗ ಖಾತರಿಯಡಿ ಹಾಗೂ ಲೋಕೋಪಯೋಗಿ, ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮದಲ್ಲಿ ಕಾರ್ಮಿಕರಾಗಿ ಕೆಲಸ ಮಾಡಿದವರಿಗೆ ಡಾ; ಬಿ.ಆರ್.ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತದಡಿ ನೊಂದಣೆ ಮಾಡಿದವರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮಾಡಲಾಗುತ್ತದೆ. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಮಲ್ಟಿ ಆರ್ಚ್ ಚೆಕ್ ಡ್ಯಾಂ ನಿರ್ಮಾಣಕ್ಕೂ ಸಚಿವರಿಂದ ಭೂಮಿ ಪೂಜೆಯನ್ನು ಕೈಗೊಳ್ಳಲಾಗುತ್ತದೆ ಮತ್ತು ಇನ್ನಿತರೆ ಕಾಮಗಾರಿಗಳಿಗೂ ಚಾಲನೆ ನೀಡಲಾಗುತ್ತದೆ ಎಂದರು.

ಡಿಸೆಂಬರ್ 8 ರಂದು ಸಚಿವರು ಗ್ರಾಮ ವಾಸ್ತವ್ಯ ಮಾಡಲಿದ್ದು ಅಂದು ಬೆಳಗ್ಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಗ್ರಾಮದಲ್ಲಿನ ಜನರ ಕುಂದುಕೊರತೆಗಳನ್ನು ಆಲಿಸಿ ಅರ್ಜಿಗಳನ್ನು ಸ್ವೀಕರಿಸುವರು. ಸಂಜೆ ಸಚಿವರು ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಿ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ ವಾಸ್ತವ್ಯ ಹೂಡುವರು. ಡಿ.9 ರಂದು ಬೆಳಗ್ಗೆ ವೇದಿಕೆ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳಿಂದ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಿ.ಎನ್.ರವೀಂದ್ರ, ಉಪವಿಭಾಗಾಧಿಕಾರಿ ರಾಘವೇಂದ್ರ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಿಜಲಿಂಗಪ್ಪನವರ ಜನ್ಮದಿನಾಚರಣೆ : ವಿಶೇಷ ಉಪನ್ಯಾಸ

ಚಿತ್ರದುರ್ಗ

ರಾಷ್ಟ್ರನಾಯಕ ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್ ವತಿಯಿಂದ ನಿಜಲಿಂಗಪ್ಪನವರ ಜನ್ಮ ದಿನಾಚರಣೆ ಸುಸಂದರ್ಭದಲ್ಲಿ ಡಿಸೆಂಬರ್ 10 ರಂದು ಚಿತ್ರದುರ್ಗ ತಾ: ಸೀಬಾರದಲ್ಲಿ ಮ.4 ಕ್ಕೆ '' ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಲ್ಲೊಂದಾದ ಭಾರತದ ನ್ಯಾಯಾಂಗ ವ್ಯವಸ್ಥೆ '' ವಿಷಯವಾಗಿ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ.

ಮುರುಘಾಮಠದ ಡಾ: ಶಿವಮೂರ್ತಿ ಮುರುಘಾ ಶರಣರು ಸಾನಿಧ್ಯ ವಹಿಸುವರು. ಭಾರತ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳು ಹಾಗೂ ಎಸ್.ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷರಾದ ಶಿವರಾಜ್ ವಿ.ಪಾಟೀಲ್ ವಿಶೇಷ ಉಪನ್ಯಾಸ ನೀಡುವರು. ಶಾಸಕ ಜಿ.ಹೆಚ್.ತಿಪ್ಪಾರೆಡ್ಡಿ ಅಧ್ಯಕ್ಷತೆ ವಹಿಸುವರು.

ಡಿ.9ಕ್ಕೆ ಬೃಹತ್ ಲೋಕಾದಾಲತ್

ಚಿತ್ರದುರ್ಗ

ತ್ವರಿತಗತಿಯಲ್ಲಿ ನ್ಯಾಯದಾನ ಒದಗಿಸಲು ಹಾಗೂ ನ್ಯಾಯಾಲಯದಲ್ಲಿನ ಹೊರೆಯನ್ನು ಕಡಿಮೆ ಮಾಡಲು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಡಿಸೆಂಬರ್ 9 ರಂದು ಬೃಹತ್ ಲೋಕಾದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಪಿ.ಎಸ್.ವಸ್ತ್ರಮಠ ತಿಳಿಸಿದರು.

ಮಂಗಳವಾರ ತಮ್ಮ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ವಿಷಯ ತಿಳಿಸಿದರು

ದೇಶಾದ್ಯಂತ ಬೃಹತ್ ಲೋಕಾದಾಲತ್ ಹಮ್ಮಿಕೊಳ್ಳಲಾಗುತ್ತಿದೆ. ಲೋಕಾದಾಲತ್‌ನಲ್ಲಿ ಜಮೀನು ವಿವಾದ, ಅಫಘಾತ, ಸೇರಿದಂತೆ ಸಿವಿಲ್ ಹಾಗೂ ರಾಜಿ, ಸಂಧಾನಕ್ಕೆ ಅರ್ಹವಾದ ಕ್ರಿಮಿನಲ್ ಪ್ರಕರಣಗಳನ್ನು ಲೋಕಾದಾಲತ್‌ನಲ್ಲಿ ತೆಗೆದುಕೊಳ್ಳಲಾಗುತ್ತದೆ ಎಂದರು.

ನ್ಯಾಯಾಲಯದಲ್ಲಿನ ಪ್ರಕರಣಗಳನ್ನು ಹೊರತುಪಡಿಸಿ ವ್ಯಾಜ್ಯಪೂರ್ವ ಪ್ರಕರಣಗಳನ್ನು ಲೋಕಾದಾಲತ್‌ನಲ್ಲಿ ತೆಗೆದುಕೊಂಡು ಇತ್ಯಾರ್ಥ ಮಾಡಲಾಗುತ್ತದೆ. ಬ್ಯಾಂಕ್‌ಗಳಲ್ಲಿನ ಸಾಲದ ಇತ್ಯರ್ಥ, ಕುಡಿಯುವ ನೀರಿನ ಕರವು ಸೇರಿದಂತೆ ರಾಜಿ, ಸಂಧಾನಕ್ಕೆ ಅರ್ಹವಿರುವ ಎಲ್ಲಾ ಪ್ರಕರಣಗಳನ್ನು ಇತ್ಯರ್ಥ ಮಾಡಲಾಗುತ್ತದೆ. ಈ ಮೂಲಕ ನ್ಯಾಯಾಲಯದಲ್ಲಿನ ಹೆಚ್ಚುವರಿ ಹೊರೆ ಹಾಗೂ ಜನರಿಗೆ ಶೀಘ್ರವಾಗಿ ನ್ಯಾಯದಾನ ನೀಡಲು ಮತ್ತು ನ್ಯಾಯದಾನ ವೆಚ್ಚವನ್ನು ಕಡಿಮೆ ಮಾಡಲು ಇದರಿಂದ ಸಹಕಾರಿಯಾಗಲಿದೆ ಎಂದರು.

ಕಳೆದ ವರ್ಷ ಜನವರಿಯಿಂದ ನವಂಬರ್ ವರೆಗೆ ಜಿಲ್ಲೆಯಲ್ಲಿ ನಡೆದ ಲೋಕಾದಾಲತ್ ನಲ್ಲಿ 2855 ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕೋರ್ಟ್‌ಗಳಲ್ಲಿರುವ ವ್ಯಾಜ್ಯಗಳು ಕಡಿಮೆ ಪ್ರಮಾಣದಲ್ಲಿವೆ. ಇತರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದಲ್ಲಿ ವ್ಯಾಜ್ಯಗಳು ಕಡಿಮೆ ಇರುವ ಜಿಲ್ಲೆ ಇದಾಗಿದೆ. ಸಿವಿಲ್ ಮತ್ತು ಕ್ರಿಮಿನಲ್ ಎಲ್ಲಾ ಪ್ರಕರಣಗಳು ಸೇರಿ 26 ಸಾವಿರ ಪ್ರಕರಣಗಳು ಬಾಕಿ ಇವೆ. 13 ಸಾವಿರ ಸಿವಿಲ್, 12700 ಕ್ರಿಮಿನಲ್ ಕೇಸ್‌ಗಳಿವೆ ಎಂದರು.

ಡಿಸೆಂಬರ್ 6 ರಿಂದಲೇ ಲೋಕಾದಾಲತ್‌ನ ಪೂರ್ವ ಸಂಧಾನಗಳ ತಯಾರಿ ಹಾಗೂ ಪ್ರಕರಣಗಳ ಬಗ್ಗೆ ಪರಿಶೀಲನೆ ನಡೆಯಲಿದೆ. ನ್ಯಾಯಾಲಯದಲ್ಲಿ ಹಾಗೂ ನ್ಯಾಯಾಲಯ ಹೊರತುಪಡಿಸಿ ಯಾವುದೇ ತರಹದ ವ್ಯಾಜ್ಯಗಳಿದ್ದಲ್ಲಿ ಲೋಕಾದಾಲತ್‌ನಲ್ಲಿ ನೊಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಬಾಕಿ ಇರುವ ಪ್ರಕರಣಗಳಲ್ಲಿ 1748 ಅಪಘಾತ ಪ್ರಕರಣಗಳಾಗಿದ್ದು ಇದರಲ್ಲಿ 660 ಚಿತ್ರದುರ್ಗಕ್ಕೆ ಸಂಬಂಧಿಸಿವೆ. ಅಪಘಾತ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾನೂನು ಸೇವಾ ಪ್ರಾಧಿಕಾರದ ಸಲಹಾ ಸಮಿತಿ ಸಭೆಯಲ್ಲಿ ಪರಾಮರ್ಶಿಸಿ ಸಂಚಾರಿ ನಿಯಮದಂತೆ ಕ್ರಮ ಹಾಗೂ ಅಪಘಾತ ವಲಯದಲ್ಲಿನ ರಸ್ತೆಗಳ ಅಭಿವೃದ್ದಿಗೂ ಆದ್ಯತೆ ನೀಡಲಾಗುತ್ತದೆ ಎಂದರು.

ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಸ್.ಆರ್.ದಿಂಡಾಲಕೊಪ್ಪ, ವಕೀಲ ಸಂಘದ ಅಧ್ಯಕ್ಷರಾದ ವಿಶ್ವನಾಥ್, ಕಾರ್ಯದರ್ಶಿ ಶಿವುಯಾದವ್ ಉಪಸ್ಥಿತರಿದ್ದರು.

ಮಾನವ ಹಕ್ಕುಗಳ ದಿನಾಚರಣೆ

ಚಿತ್ರದುರ್ಗ

ಮಾನವ ಹಕ್ಕುಗಳ ಉಲ್ಲಂಘನೆಯಾಗುವುದನ್ನು ತಡೆಯುವ, ರಕ್ಷಣೆ ನೀಡುವ ಹಾಗೂ ಹಕ್ಕುಗಳ ಉಲ್ಲಂಘನೆಗೆ ಒಳಗೊಂಡವರಿಗೆ ನೆರವು ನೀಡುವ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪ್ರತಿ ವರ್ಷ ಡಿಸೆಂಬರ್ 10 ರಂದು ಮಾನವ ಹಕ್ಕುಗಳ ದಿನಾಚರಣೆಯನ್ನು ಆಯೋಜಿಸಲಾಗುತ್ತಿದೆ.

ಡಿಸೆಂಬರ್ 10 ರಂದು ಬೆ.9 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಮೆರವಣಿಗೆ ಪ್ರಾರಂಭಿಸಿ, ನಂತರ ತ.ರಾ.ಸು. ರಂಗಮಂದಿರದಲ್ಲಿ ಬೆ.10 ಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ ಮಾನ್ ಹಕ್ಕುಗಳ ದಿನಾಚರಣೆ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮುಂದುವರೆದ ಆನೆಗಳ ಹಾವಳಿ

ಆಯ್ತೊಳಿನ ವ್ಯಕ್ತಿ ಮೇಲೆ ದಾಳಿ: ಆಸ್ಪತ್ರೆಗೆ ದಾಖಲು

ಚಿತ್ರದುರ್ಗ

ಜಿಲ್ಲೆಯಲ್ಲಿ ಆನೆಗಳ ಹಾವಳಿ ಮುಂದುವರೆದಿದ್ದು, ಬುಧವಾರ ಮುಂಜಾನೆ ಮೊತ್ತೊಬ್ಬರ ಮೇಲೆ ದಾಳಿ ನಡೆಸಿವೆ.

ಚಿತ್ರದುರ್ಗ ತಾಲ್ಲೂಕಿನ ಆಯ್ತೊಳು ಗ್ರಾಮದ ಕಾಟಪ್ಪ ಎಂಬುವರ ಮೇಲೆ ಮುಂಜಾನೆ ಆನೆಗಳು ದಾಳಿ ನಡೆಸಿದ ಪರಿಣಾಮ ತೀವ್ರ ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳವಾರ ಸಂಜೆ ಗಾಯಗೊಂಡಿದ್ದ ರವಿ ಎಂಬುವರೂ ಸಹ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ

ಪಾಪೇನಹಳ್ಳಿಯಲ್ಲಿ ಕಾಣಿಸಿಕೊಂಡ ಆನೆಗಳನ್ನು ಓಡಿಸುವ ಪ್ರಯತ್ನಗಳು ನಡೆದಿವೆ. ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಮೂಲಕ ಚಿತ್ರದುರ್ಗ ತಾಲ್ಲೂಕ್‌ನ್ನು ಪ್ರವೇಶ ಮಾಡಿರುವ ಆನೆಗಳು ಕಳೆದ ಹಲವಾರು ದಿನಗಳಿಂದ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಸುತ್ತಾಡುತ್ತಿವೆ, ನಿನ್ನೆ ಸಹಾ ಚಳ್ಳಕೆರೆ ತಾಲ್ಲೂಕಿನಲ್ಲಿ ಕಾಣಿಸಿಕೊಂಡು ನಂತರ ಚಿತ್ರದುರ್ಗ ತಾಲ್ಲೂಕಿನ ಗಡಿ ಮೂಲಕ ಆಯಿತೋಳು ಗ್ರಾಮವನ್ನು ಪ್ರವೇಶ ಮಾಡಿದೆ.

ಮಂಗಳವಾರ ರಾತ್ರಿ ಮೊಳಕಾಲ್ಮುರು ಹೊರವಲಯದಿಂದ ಹೊರಟ ಆನೆಗಳು ಕೋನಸಾಗರ, ಬಿ.ಜಿ.ಕೆರೆ ಮಾರ್ಗವಾಗಿ ಹೆದ್ದಾರಿ ದಾಟಿಕೊಂಡು ಗರಣಿ ಕ್ರಾಸ್ ಮೂಲಕ ತಿಮ್ಮಪ್ಪಯ್ಯನ ಹಳ್ಳಿ ಕೆರೆ ಅಂಗಳ ತಲುಪಿವೆ. ನೀರಿಲ್ಲದ ಕೆರೆಯಲ್ಲಿ, ಬಳ್ಳಾರಿ ಜಾಲಿ ಮುಳ್ಳಿನ ಗಿಡಗಳ ಪೊದೆಗಳು ಬೆಳೆದಿವೆ. ಅವುಗಳ ಮರೆಯಲ್ಲಿ ಆನೆಗಳು ವಿರಮಿಸಿವೆ.

ಇಂದು ಬೆಳಿಗ್ಗೆ ಗ್ರಾಮದ ಕಾಟಪ್ಪ (60) ತನ್ನ ಹೊಲದಲ್ಲಿ ಬೆಳದಿದ್ದ ಅವರೆಕಾಯಿಯನ್ನು ಕಾಯುವ ಸಲುವಾಗಿ ಹೊಲದ ಕಡೆಗೆ ಹೋಗಿದ್ದಾರೆ, ಆದರೆ ಅಲ್ಲಿಂದ ಸ್ವಲ್ಪ ಸಮಯದಲ್ಲಿಯೆ ಆತನ ಮೇಲೆ ಆನೆಗಳು ಧಾಳಿ ಮಾಡಿದೆ. ಆನೆಯ ಧಾಳಿಯಿಂದಾಗಿ ಆತನ ಹೊಟ್ಟೆಯ ಮೇಲೆ ಹೆಚ್ಚಿನ ಅನಾಹುತವಾಗಿದ್ದು, ಕರಳು ಹೊರ ಬಂದಿದ್ದು, ಪ್ರಜ್ಞಾನಹೀನಾರಾಗಿದ್ದ ಅವರನ್ನು ಕೂಡಲೇ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದು ಕೊಂಡು ಬರಲಾಗಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ತುರ್ತ ಚಿಕಿತ್ಸೆ ನೀಡಿದ ನಂತರ ಆವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಗೆ ಕಳುಹಿಸಲಾಗಿದೆ. ಮಂಗಳವಾರ ಸಂಜೆ ಗಾಯಗೊಂಡಿದ್ದ ರವಿ (32) ಅವರಿಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅವರು ಅಪಾಯದಿಂದ ಪಾರಾಗಿದ್ದಾರೆ ಆತನನ್ನು ಸಹಾ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಗೆ ಕಳುಹಿಸಲಾಗಿದೆ.

ಪಾಪೇನಹಳ್ಳಿ ವ್ಯಾಪ್ತಿಯಲ್ಲಿ ಬೀಡುಬಿಟ್ಟಿರುವ ಆನೆಗಳನ್ನು ಓಡಿಸುವ ಪ್ರಯತ್ನ ಮುಂದುವರಿದಿದೆ. ಸ್ಥಳಕ್ಕೆ ಡಿಎಫ್‌ಓ ಮಂಜುನಾಥ್ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಮೊಕ್ಕಾಂ ಹೂಡಿದ್ದಾರೆ.

ಶಾಸಕರ ಭೇಟಿ : ಆನೆ ಧಾಳಿ ಮಾಡಿದ ಸುದ್ದಿ ತಿಳಿಯುತ್ತಿದ್ದತೆಯೆ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ತಿಪ್ಪಾರೆಡ್ಡಿ ಗಾಯಾಳುವನ್ನು ವೀಕ್ಷಿಸಿ, ಸರಿಯಾದ ರೀತಿಯಲ್ಲಿ ಚಿಕಿತ್ಸೆಯನ್ನು ನೀಡುವಂತೆ ವೈದ್ಯರುಗಳಿಗೆ ಸೂಚನೆ ನೀಡಿದರು.

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮತ್ತು ತಿದ್ದುಪಡಿಗೆ ಅರ್ಜಿ ಆಹ್ವಾನ

ಚಿತ್ರದುರ್ಗ

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ 2018 ರ ಜನವರಿ 1 ಕ್ಕೆ 18 ವರ್ಷ ಪೂರ್ಣಗೊಳ್ಳುವವರು ಹಾಗೂ ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಲ್ಲದವರು, ಹೆಸರು ಕೈಬಿಟ್ಟು ಹೋಗಿರುವವರು ಹಾಗೂ ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ತಿದ್ದುಪಡಿ ಮಾಡಿಸಬೇಕಾದಲ್ಲಿ ಮತ್ತು ಅದೇ ವಿಧಾನಸಭಾ ಕ್ಷೇತ್ರದ ಬೇರೆ ಮತಗಟ್ಟೆಗೆ ವರ್ಗಾಯಿಸಬೇಕಾಗಿದ್ದಲ್ಲಿ ನಿಗದಿಪಡಿಸಿರುವ ನಮೂನೆಗಳಲ್ಲಿ ಅರ್ಜಿಯನ್ನು ಇದೇ ನವಂಬರ್ 30 ರಿಂದ ಡಿಸೆಂಬರ್ 29 ರವರೆಗೆ ಭರ್ತಿ ಮಾಡಿ ತಮ್ಮ ವ್ಯಾಪ್ತಿಯ ಮತದಾನ ಕೇಂದ್ರದಲ್ಲಿ ನೀಡಿ ಸ್ವೀಕೃತಿ ಪಡೆಯಲು ಚಿತ್ರದುರ್ಗ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಅರ್ಜಿ ಸ್ವೀಕರಿಸುವ ಸಮಯ ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ. ಮತದಾರರ ಪಟ್ಟಿಯಲ್ಲಿ ಮತದಾರರ ಹೆಸರನ್ನು ನೊಂದಾಯಿಸುವುದು ಪ್ರತಿಯೊಬ್ಬ ನಾಗರೀಕರ ಹಕ್ಕಾಗಿರುತ್ತದೆ.

ಆಗ್ನೇಯ ಶಿಕ್ಷಕರ ಮತದಾರರ ಪಟ್ಟಿಗೆ ಸೇರ್ಪಡೆ

ಚಿತ್ರದುರ್ಗ

ಮತದಾರರ ನೋಂದಣಿ ನಿಯಮ 1960 ರ ಪ್ರಕಾರ ಕರ್ನಾಟಕ ಆಗ್ನೇಯ ಶಿಕ್ಷಕರ ಮತದಾರರ ಪಟ್ಟಿಯನ್ನು ಸಿದ್ದಪಡಿಸಲಾಗಿದ್ದು ನವಂಬರ್ 21 ರಂದು ಸಾರ್ವಜನಿಕರ ಮಾಹಿತಿಗಾಗಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರ ಕಚೇರಿ, ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ, ತಹಶೀಲ್ದಾರರುಗಳ ಕಚೇರಿಯಲ್ಲಿ ಪ್ರಕಟಿಸಲಾಗಿದೆ.

ಮತದಾರರ ಪಟ್ಟಿ ತಯಾರಿಕೆಗೆ 2017 ನವಂಬರ್ 1 ಅರ್ಹತಾ ದಿನಾಂಕವಾಗಿದೆ. ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು ಯಾವುದಾದರೂ ಕ್ಲೇಮುಗಳಿದ್ದಲ್ಲಿ ನಮೂನೆ 19 ರಲ್ಲಿ, ಹೆಸರು ಸೇರಿಸಲು ಆಕ್ಷೇಪಣೆಯಿದ್ದಲ್ಲಿ, ಅಥವಾ ಯಾವುದೇ ನಮೂದುಗಳ ವಿವರದ ಬಗ್ಗೆ ಆಕ್ಷೇಪಣೆಯಿದ್ದರೆ ಅಂತಹವುಗಳನ್ನು ನವಂಬರ್ 21 ರಿಂದ ಡಿಸೆಂಬರ್ 21 ರೊಳಗೆ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮುಖ್ಯ ಚುನಾವಣಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಪ್ರಜಾ ಪ್ರಗತಿ ಓದಿರಿ
ಪ್ರಗತಿ ಟಿವಿ ವೀಕ್ಷಿಸಿ

ಅವಮಾನದಿಂದಲೇ ಶಿಕ್ಷಣ ಕಲಿತ ಡಾ.ಅಂಬೇಡ್ಕರ್

ಚಳ್ಳಕೆರೆ

ರಾಷ್ಟ್ರದ ಸಂವಿಧಾನದ ಕರ್ತೃ ಡಾ.ಬಿ.ಆರ್. ಅಂಬೇಡ್ಕರ್ ತಮ್ಮ ಬಾಲ್ಯದಲ್ಲಿ ಶಿಕ್ಷಣವನ್ನು ಪಡೆಯುವುದೇ ಅತ್ಯಂತ ಕಷ್ಟಕರವಾಗಿತ್ತು. ಅವರನ್ನು ಶಾಲೆಗೆ ದಾಖಲಿಸಿಕೊಳ್ಳಲು ಹಿಂದೇಟು ಹಾಕಲಾಗುತ್ತಿತ್ತು. ಶಾಲೆಯಲ್ಲಿ ಅವರಿಗೆ ಎಲ್ಲಾ ವಿದ್ಯಾರ್ಥಿಗಳಂತೆ ಬೋಧನೆ ಮಾಡದೆ ಅತ್ಯಂತ ಉದಾಸೀನ ಭಾವನೆಯಿಂದ ನೋಡಲಾಗುತ್ತಿತ್ತು. ಇಂತಹ ಅವಮಾನ ಅಪಮಾನಗಳನ್ನು ಸಹಿಸಿಕೊಂಡಿದ್ದ, ಈ ರಾಷ್ಟ್ರದ ಆಡಳಿತಕ್ಕೆ ಸಂವಿಧಾನವನ್ನು ಬರೆದುಕೊಟ್ಟ ಮಹಾನ್ ಧೀಮಂತ ನಾಯಕ ಇಂದಿಗೂ ಸಹ ಇವರ ಸಾವಿನ ದಿನವನ್ನು ಮಾದಿಗ ಸಮುದಾಯ ಅತ್ಯಂತ ನೋವಿನಿಂದಲೇ ಅನುಭವಿಸುತ್ತಿದೆ ಎಂದು ಅಂಬೇಡ್ಕರ್ ಯುವ ಸೇನೆ ರಾಜ್ಯಾಧ್ಯಕ್ಷ ಪಿ.ಮೂರ್ತಿ ತಿಳಿಸಿದರು.

ಅವರು ಬುಧವಾರ ಇಲ್ಲಿನ ಚಿತ್ರದುರ್ಗ ರಸ್ತೆಯಲ್ಲಿ ಅಂಬೇಡ್ಕರ್ ಸೇನೆ ಕಾರ್ಯಾಲಯವನ್ನು ಉದ್ಘಾಟಿಸಿ ಮಾತನಾಡಿದರು. ಇಂದಿಗೂ ಸಹ ಸಮಾಜದ ಎಲ್ಲಾ ಸಮುದಾಯಗಳಂತೆ ಈ ಸಮುದಾಯ ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುತ್ತಿಲ್ಲ, ಸರ್ಕಾರ ಈ ಸಮುದಾಯಕ್ಕೆ ಯಾವುದೇ ರೀತಿಯ ರಕ್ಷಣೆಯನ್ನು ನೀಡುತ್ತಿಲ್ಲ, ಇಂದಿಗೂ ಸಹ ನಾಡಿನ ಉದ್ದಕ್ಕೂ ದಲಿತ ಮಹಿಳೆಯರ ಮೇಲೆ ನಿರಂತರ ಅತ್ಯಾಚಾರ, ದೌರ್ಜನ್ಯ, ಕೊಲೆ ಪ್ರಕರಣಗಳು ಮಿತಿಮೀರಿ ನಡೆಯುತ್ತಿವೆ. ಇಂತಹ ಘೋರ ಪ್ರಕರಣಗಳನ್ನು ಖಂಡಿಸುವಲ್ಲಿ ಸಹ ದಲಿತ ಸಂಘಟನೆಗಳು ಹೆಚ್ಚು ಆಸಕ್ತಿ ತೋರುತ್ತಿಲ್ಲ, ಆದ್ದರಿಂದ ಅಂಬೇಡ್ಕರ್ ಸೇನೆ ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಎಲ್ಲೇ ಈ ಸಮುದಾಯದ ಮೇಲೆ ದೌರ್ಜನ್ಯ ನಡೆಸಲು ಅದನ್ನು ಖಂಡಿಸಿ ಪ್ರತಿಭಟಿಸಿ ನಿರ್ಧರಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಉಪನ್ಯಾಸಕ ಆರೂಡಿ ಮಲ್ಲಯ್ಯ, ಅಂಬೇಡ್ಕರ್‌ರವರ ಸಂಪೂರ್ಣ ವಿಚಾರಧಾರೆಗಳನ್ನು ಈ ಸಮಾಜದ ಕೆಲವು ಶಕ್ತಿಗಳು ಇಂದಿಗೂ ಒಪ್ಪುತ್ತಿಲ್ಲ, ನಾಡಿನಲ್ಲಿ ದಶಕಗಳಿಂದ ನಡೆಯುತ್ತಿರುವ ಶೋಷಣೆ ಮತ್ತು ಅಪಮಾನಗಳನ್ನು ಸಹಿಸುತ್ತಾ ಬಂದಿರುವ ಮಾದಿಗ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಬಿ.ಆರ್.ಅಂಬೇಡ್ಕರ್‌ರವರ ತತ್ವ, ಆದರ್ಶಗಳು ಹೆಚ್ಚು ಉಪಯುಕ್ತವಾಗುತ್ತವೆ. ಆದರೆ, ಅಂಬೇಡ್ಕರ್‌ರವರ ಬಹುತೇಕ ಸಮಾಜಮುಖಿ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರ ತೆರೆಮರೆಯ ಪ್ರಯತ್ನ ನಡೆಸುತ್ತಿದೆ. ಅಂಬೇಡ್ಕರ್‌ರವರು ಎಲ್ಲಾ ಸಮುದಾಯಗಳ ಅಭ್ಯದಯವನ್ನು ಬಯಸುವ ನಾಯಕರಾಗಿದ್ದರು ಎಂದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಷಡಾಕ್ಷರಿಮುನಿ ಸ್ವಾಮಿಜಿ, ನಮ್ಮ ಸಮಾಜ ಎಂದಿಗೂ ಸಮಾಜದ ಒಳಿತಿಗಾಗಿ ಶ್ರಮಿಸಿದವರನ್ನು ಗೌರವಿಸಲು ಹಿಂದೆ ಮುಂದೆ ನೋಡುತ್ತದೆ. ಇಂದು ಈ ನಾಡಿನ ದಲಿತ ಜನಾಂಗವೂ ಸೇರಿದಂತೆ ಎಲ್ಲರೂ ಸಹ ಅನೇಕ ಸೌಲಭ್ಯಗಳನ್ನು ಅನುಭವಿಸುತ್ತಾ ಬಂದಿದ್ದಾರೆ. ಆದರೆ, ದಲಿತ ಸಮುದಾಯದಲ್ಲಿ ಮಾತ್ರ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಗತಿಯತ್ತ ಹೆಜ್ಜೆ ಇಡಬೇಕಿತ್ತು. ಈ ಸಮುದಾಯದ ಏಳಿಗೆಯನ್ನು ಸಮಾಜದ ಕೆಲವು ಶಕ್ತಿಗಳು ಸಹಿಸುತ್ತಿಲ್ಲ, ಕಾರಣ ಅಂಬೇಡ್ಕರ್‌ರವರ ಸಂವಿಧಾನ ನೀಡಿದ ಬಹುತೇಕ ಎಲ್ಲಾ ಸೌಲಭ್ಯಗಳು ಸಮಾಜದ ಕಟ್ಟಕಡೆಯಲ್ಲಿರುವ ಮಾದಿಗ ಸಮುದಾಯಕ್ಕೆ ಇನ್ನೂ ತಲುಪಿಲ್ಲ, ಈ ಸಮುದಾಯದ ಮುಂಬರುವ ದಿನಗಳಲ್ಲಿ ಎಲ್ಲಾ ಒಳ ಪಂಗಡಗಳನ್ನು ಸಂಘಟಿಸಿ ಒಂದು ದೊಡ್ಡ ಶಕ್ತಿಯಾಗಿ ಹೊರಹೊಮ್ಮಬೇಕಿದೆ. ರಾಜಕೀಯ ಕ್ಷೇತ್ರವೂ ಸೇರಿದಂತೆ ಬಹುತೇಕ ಕ್ಷೇತ್ರಗಳಲ್ಲಿ ಈ ಸಮುದಾಯದ ಮುಖಂಡರು ಕಾರ್ಯನಿರ್ವಹಿಸಬೇಕಿದೆ. ಎಲ್ಲಿಯ ತನಕ ಸಮುದಾಯದ ಜನರು ಶಿಕ್ಷಣವಂತರಾಗಿ ಜಾಗೃತಗೊಳ್ಳುವುದಿಲ್ಲವೋ ಅಲ್ಲಿಯ ತನಕ ಯಾವುದೇ ರೀತಿಯ ಅಭಿವೃದ್ಧಿ ಈ ಸಮುದಾಯದಕ್ಕೆ ಮರಿಚೀಕೆಯಾಗಲಿದೆ ಎಂದರು.

ತಾಲ್ಲೂಕು ಅಂಬೇಡ್ಕರ್ ಸೇನೆ ಅಧ್ಯಕ್ಷ ಕೆ.ಶಿವಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ಅಂಬೇಡ್ಕರ್ ಸೇನೆ ರಚನೆಯ ಬಗ್ಗೆ ಹೆಚ್ಚಿನ ಒತ್ತಡವಿತ್ತು. ಅಧ್ಯಕ್ಷರೂ ಸಹ ಒಪ್ಪಿಗೆ ನೀಡಿ ಕಾರ್ಯಕ್ರಮಕ್ಕೆ ಆಗಮಿಸಿ ಚಾಲನೆ ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ಅಂಬೇಡ್ಕರ್ ಸೇನೆ ಸಮಾಜದಲ್ಲಿ ತುಳಿತಕ್ಕೆ ಒಳಗಾಗುವ ಎಲ್ಲಾ ಸಮುದಾಯದ ಅಭ್ಯದಯಕ್ಕೆ ಶ್ರಮಿಸಲಿದೆ ಎಂದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ತಿಪ್ಪೇಸ್ವಾಮಿ, ಹಿರಿಯ ಮುಖಂಡ ಎಸ್.ಎಚ್.ಸೈಯದ್, ಜಿಲ್ಲಾಧ್ಯಕ್ಷ ಎಂ.ಎನ್.ರಂಗಸ್ವಾಮಿ, ನಗರಸಭೆ ನಾಮಿನಿ ಸದಸ್ಯ ವೀರಭದ್ರಪ್ಪ, ಪರಸಪ್ಪ, ಆರ್.ಪ್ರಸನ್ನಕುಮಾರ್, ನರೇನಹಳ್ಳಿ ಅರುಣ್ ಕುಮಾರ್, ವೀರಣ್ಣ ಮುಂತಾದವರು ಉಪಸ್ಥಿತರಿದ್ದರು.

ತಾ.ಬ್ಲಾಕ್ ಕಾಂಗ್ರೆಸ್ ವತಿಯಿಂದ ಅಂಬೇಡ್ಕರ್ ಅವರ 61ನೇ ಪರಿನಿರ್ವಾಣ ಕಾರ್ಯಕ್ರಮ

ಹಿರಿಯೂರು

ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ಸಂವಿಧಾನ ಶಿಲ್ಪಿ ಡಾ|| ಬಾಬಾ ಸಾಹೇಬ ಅಂಬೇಡ್ಕರ್‌ರವರ 61ನೇ ಪರಿನಿರ್ವಾಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಖಾದಿ ಜೆ.ರಮೇಶ್‌ರವರು ಪ್ರಪಂಚದಲ್ಲಿಯೇ ಅತ್ಯುತ್ತಮವಾದ ಸಂವಿಧಾನವನ್ನು ನೀಡಿರುವಂತಹ ಖ್ಯಾತಿ ಬಾಬಾ ಸಾಹೇಬ ಅಂಬೇಡ್ಕರ್ ರವರಿಗೆ ಸಲ್ಲುತ್ತದೆ. ಸಮಾಜದ ಎಲ್ಲಾ ವರ್ಗದ ಸಮಾನತೆಗಾಗಿ ತಮ್ಮ ಜೀವಿತ ಅವಧಿಯ ಕೊನೆವರೆಗೂ ಹೋರಾಡಿದ ಬಾಬಾ ಸಾಹೇಬ ಅಂಬೇಡ್ಕರ್ ಎಂದು ತಿಳಿಸಿದರು.

ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕಲ್ಲಹಟ್ಟಿ ತಿಪ್ಪೇಸ್ವಾಮಿರವರು ಮಾತನಾಡಿ ದಲಿತರ ಸೂರ್ಯ ಬಾಬಾ ಸಾಹೇಬ ಅಂಬೇಡ್ಕರ್‌ರವರು ಹಲವಾರು ಪದವಿಗಳನ್ನು ವಿದೇಶದಲ್ಲಿ ವ್ಯಾಸಂಗ ಮಾಡಿದ ಏಕೈಕ ವ್ಯಕ್ತಿ ಬಾಬಾ ಸಾಹೇಬ ಅಂಬೇಡ್ಕರ್ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎ.ಪಿ.ಎಂ.ಸಿ ಅಧ್ಯಕ್ಷರಾದ ಈರಲಿಂಗೇಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಂದಿಕೆರೆ ಸುರೇಶ್‌ಬಾಬು, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಪುಷ್ಪಲತಾ ಪುಟ್ಟರಾಜು, ನಗರ ಎಸ್.ಸಿ. ಘಟಕ ಅಧ್ಯಕ್ಷರಾದ ಚಂದ್ರನಾಯ್ಕ, ಜ್ಞಾನೇಶ್, ಶಿವು, ಹಾಲುಮಾದೇನಹಳ್ಳಿ ರವಿಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷರಾದ ರಫೀಕ್ ಅಹಮ್ಮದ್, ಎಸ್.ಟಿ.ಘಟಕ ಅಧ್ಯಕ್ಷರಾದ ಗಿರೀಶ್, ಆಲೂರು ಜೈರಾಮ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ದಾದಾಪೀರ್, ರಾಮಚಂದ್ರಪ್ಪ ಕಲ್ಲಹಟ್ಟಿ, ಕೆಂಚರಾಜು ಟಿ.ಗೊಲ್ಲಹಳ್ಳಿ, ಪ್ರದೀಪ್ ವೇದಾವತಿನಗರ ಮತ್ತಿತರರು ಉಪಸ್ಥಿತರಿದ್ದರು.

ಅಪಘಾತ ಗಾಯಾಳುಗೆ ನೆರವು ನೀಡಿದವರಿಗೆ ಜೀವರಕ್ಷಕ ಪ್ರಶಸ್ತಿ

ಚಿತ್ರದುರ್ಗ

ರಸ್ತೆ ಅಪಘಾತದಂತಹ ಸಂದರ್ಭದಲ್ಲಿ ತಕ್ಷಣ ಚಿಕಿತ್ಸೆ ಒದಗಿಸಲು ಹಾಗೂ ಜೀವ ಉಳಿಸಲು ನೆರವಾಗುವ ಗಾಯಾಳುಗಳಿಗೆ ಸ್ಪಂದನೆ ನೀಡಿದ ಪರೋಪಕಾರಿಗಳಿಗೆ ''ಜೀವರಕ್ಷಕ'' ಪ್ರಶಸ್ತಿ ನೀಡುವ ಮೂಲಕ ಅಂತಹ ಲೋಕೋಪಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಅಂಗಸಂಸ್ಥೆಯಾದ ಸುವರ್ಣ ಆರೋಗ್ಯ ಸುರಕ್ಷ ಟ್ರಸ್ಟ್‌ನವರು ಜೀವರಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ರಾಜ್ಯ ವ್ಯಾಪ್ತಿಯಲ್ಲಿ ಘಟಿಸುವ ರಸ್ತೆ ಅಪಘಾತದ ಯಾವುದೇ ಗಾಯಾಳುಗಳಿಗೆ 48 ಗಂಟೆಗಳವರೆಗೆ ಗರಿಷ್ಠ ರೂ.25,000/- ಗಳವರೆಗೆ ಉಚಿತ ತುರ್ತು ಚಿಕಿತ್ಸೆ ಒದಗಿಸುವ ಸಲುವಾಗಿ ಕರ್ನಾಟಕ ಸರ್ಕಾರವು ನೂತನವಾಗಿ ಜಾರಿಗೊಳಿಸಿರುವ ಮುಖ್ಯಮಂತ್ರಿಗಳ ಸಾಂತ್ವನ ಯೋಜನೆಯಲ್ಲಿ ನೀಡುತ್ತಿದೆ. ಅರ್ಜಿಗಳನ್ನು ಜಿಲ್ಲಾ ಜೀವರಕ್ಷಕ ಪ್ರಶಸ್ತಿ ಸಮಿತಿಯು ಪರಿಶೀಲಿಸಿ ಮಾರ್ಗಸೂಚಿಗಳನ್ವಯ ಮೌಲ್ಯಮಾಪನ ನಡೆಸಿ ವ್ಯಕ್ತಿ ನೀಡಿದ ಸಹಾಯ ತಿಳಿಯಲಾಗುವುದು. ಪ್ರತಿವರ್ಷ ಆಗಸ್ಟ 15 ಮತ್ತು ಜನವರಿ 26 ರಂದು ಪ್ರಶಸ್ತಿ ನೀಡಲಾಗುವುದು. ಅರ್ಜಿ ಸಲ್ಲಿಸಲು ಡಿಸೆಂಬರ್ 30 ಕೊನೆಯ ದಿನವಾಗಿದ್ದು, ಜಿಲ್ಲಾ ಸಂಯೋಜಕರು ಹಾಗೂ ಆಯಾ ತಾಲ್ಲೂಕುಗಳ ಆರೋಗ್ಯ ಮಿತ್ರ ಇವರಿಂದ ಅರ್ಜಿ ಪಡೆಯುಬಹುದಾಗಿದೆ. ಹೆಚ್ಚಿನ ಮಾಹಿತಿಗೆ ನಂ.7259003339 ನ್ನು ಸಂಪರ್ಕಿಸಬಹುದು.